


### ನೆನಪುಗಳ ಮೆಲುಕು

ಹಳೆಯ ಮಧುರ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿದ 'ಸಾವಿರ ದ್ವೀಪಗಳು!' ವಿ.ಪ್ರದೀಪಕುಮಾರರ ಲೇಖನ ಅದ್ಭುತವಾಗಿತ್ತು.

-ಆನಂದ್, ಜಿ.ಕೆ.ಶ್ರೀಮತಿ, ಕೋಟೇಶ್ವರ ಸೂರ್ಯ ನಾರಾಯಣರಾವ್, ಬೆಂಗಳೂರು/ ಎಂ.ಮಲ್ಲಯ್ಯ, ಶ್ರೀರಾಂಪುರ/ ಟಿ.ಎನ್.ಸರಸ್ವತಿ, ತಿಪಟೂರು, ಬಿ.ಎಸ್.ಮುಳ್ಳೂರ, ಹಲಗತ್ತಿ/ ವೈ.ಎಂ.ಚಂದ್ರಶೇಖರ, ಸಿದ್ದಾಪುರ

### ಅಲ್ಲಿ ವಿವೇಕಾನಂದರೂ ನೆಲೆಸಿದ್ದರು..!

ಸ್ವಾಮಿ ವಿವೇಕಾನಂದರು ಕ್ರಿ.ಶ. 1895ರಲ್ಲಿ ನ್ಯೂಯಾರ್ಕ್‌ನಲ್ಲಿದ್ದರು. ಬೇಸಿಗೆ ರಜೆಯನ್ನು ಕಳೆಯಲು ಸಹಸ್ರ ದ್ವೀಪೋದ್ಯಾನಕ್ಕೆ ತೆರಳಿದ್ದರು. ಅಲ್ಲಿಯ ವೆಲ್ಲೆಸ್ಲಿ ದ್ವೀಪದಲ್ಲಿ ಮಿಸ್ ಡಚರ್ ಎಂಬವರ ಮನೆಯಲ್ಲಿ ಸುಮಾರು ಏಳು ವಾರ ಕಾಲ ಇದ್ದರು. ಸ್ವಾಮೀಜಿಯವರ ಬೋಧನೆಗಳನ್ನು ಮಿಸ್. ವಾಲ್ಡೋ ಎಂಬವರು ಚಿಕ್ಕ ಚಿಕ್ಕ ಟಿಪ್ಪಣಿ ಮಾಡಿದ್ದಾರೆ. ಅದನ್ನು ಸುಮಾರು ವರ್ಷದ ನಂತರ 'inspired talks' ಎನ್ನುವ ಪುಸ್ತಕವನ್ನಾಗಿ ಪ್ರಕಟಿಸಿದ್ದಾರೆ. ಅದು ಕನ್ನಡದಲ್ಲಿ 'ಸ್ಫೂರ್ತಿವಾಣಿ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

ವಿವೇಕಾನಂದರು ಅಲ್ಲಿಯೇ ಸುಂದರ ಕವಿತೆಯೊಂದನ್ನು ರಚಿಸಿದ್ದಾರೆ. 'song of the sanyasin' ಎಂಬ ಈ ಕವನವನ್ನು ನಮ್ಮ ರಾಷ್ಟ್ರಕವಿ ಕುವೆಂಪು ಅಷ್ಟೇ ಸೊಗಸಾಗಿ 'ಸನ್ಯಾಸಿ ಗೀತೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಹಾಡನ್ನು ರಾಮಕೃಷ್ಣ ಆಶ್ರಮದ ಸ್ವಾಮಿ ಪುರುಷೋತ್ತಮಾನಂದಜೀ ಅವರು ರಾಗ ತಾಳ ಸಹಿತ ಹಾಡಿ ಸಾವಿರಾರು ಜನರನ್ನು ಸಂತೋಷಗೊಳಿಸಿದ್ದಾರೆ.

-ರತ್ನ ಮ., ಬೆಂಗಳೂರು

### ವಸತಿ ದರ ಕೈಗೆಟುಕುವುದೆ?

ಜಾರ್ಜ್ ಮತ್ತು ಲೂಯಿಸ್‌ರ ಪ್ರೇಮಕಥೆ, ಶಹಜಹಾನ್ ಮತ್ತು ಮುಮ್ತಾಜರ ಕಥೆಗಿಂತ ಕಡಿಮೆಯೇನಲ್ಲ. ಆದರೆ ವಸತಿ ದರ..?

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಸುಂದರ ಈರುಳ್ಳಿ!

'ಈರುಳ್ಳಿ ಷೋ!' ಪಿ.ಎ. ಛಾಯಾ ಅವರ ಚಿತ್ರಬರಹ ಸುಂದರವಾಗಿತ್ತು.

-ರೇಖಾ ರವೀಂದ್ರನಾಥ ಯಡಹಳ್ಳಿ, ಬೀಳಗಿ

### ಸ್ವಾಗತಾರ್ಹ ಪರಿಚಯ

ಪ್ರಭಾ ಬೆಂಡಿಗೇರಿ ಅವರನ್ನು ದೇವಿಕಾ ನಗರಕರ ಪರಿಚಯಿಸಿದ್ದು ಸ್ವಾಗತಾರ್ಹ.

-ಎಸ್. ಚನ್ನಪ್ಪ, ಮೈಸೂರು

### ಸಕಾಲಿಕ ಸೇತುವೆ

ಚಂದ್ರಹಾಸ ಚಾರ್ಮಾಡಿ'ಮಣ್ಣಿನ ಸೇತುವೆ ಕಟ್ಟಿದರು!' ಚಿಕ್ಕ ಸಕಾಲಿಕ ಲೇಖನ.

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

### ಬಡವರ ಮದಗದ ಕೆರೆ

ಒಂದು ವಿದೇಶ, ಮತ್ತೊಂದು ಸ್ವದೇಶದ ಪ್ರವಾಸ ಕಥನ ಇಷ್ಟವಾದವು. ಹಣ ಕಡಿಮೆ ಇರುವವರು ಮದಗದ ಕೆರೆ ನೋಡಲು ಹೋಗಬಹುದು.

– ಮೊಳಕಾಲ್ಮುರು ಸುರೇಶ, ಬಳ್ಳಾರಿ/ ಗಂಗಾಧರ ಸಾದರಹಳ್ಳಿ, ಹುಬ್ಬಳ್ಳಿ

### ಉತ್ತಮ ಮಿನಿಕಥೆ

ರತನಸಿಂಹರ ಉರ್ದು ಮಿನಿ ಕಥೆ 'ಅಪ್ಸರೆ ಮತ್ತು ಬಡವ' ಚೆನ್ನಾಗಿದೆ. ಹೆಣ್ಣು ಮಕ್ಕಳು ನೆಮ್ಮದಿಯ ನಗುಮೊಗ ಹೊಂದಿದರೆ ನಿಜವಾಗಲೂ ಅಪ್ಸರೆಗಿಂತ ಚೆಲುವೆಯರು. ಬಡವನ ದೃಷ್ಟಿಕೋನ ಸರಿಯಾಗಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಸಹಜ ಸುಂದರ ಕಥೆ

ಸತ್ಯಬೋಧರ 'ಸರಸಕ್ಕನ ಸಂಸಾರ' ಸಹಜ ಸುಂದರ ಕಥೆ. ಹೊಸಪೇಟೆ ಭಾಗದ ಸೊಗಸಾದ ಭಾಷೆ, ಕಡೆದಿಟ್ಟ ಪಾತ್ರಗಳು ಹಿಡಿಸಿದವು.

-ರಾಜಶೇಖರ ಗೌಡ, ಕೊಟ್ಟೂರು/ ಪ್ರಾಣೇಶ್‌ಲಕ್ಷ್ಮೀ, ಹೊಸಪೇಟೆ/ ಬಸವ ಶಿವಪೂಜೆ, ಹಗರಿ ಬೊಮ್ಮನಹಳ್ಳಿ/ ಎನ್.ಗೋಪಾಲರಾವ್, ಬೆಂಗಳೂರು

### ಮೈಜುಂ ಎನಿಸುವ ಹೆದ್ದಾರಿ!

'ಮರಣದ ಹೆದ್ದಾರಿಯಲ್ಲಿ' ಎಂ.ಕೆ.ಯವರ ಚಿತ್ರಲೇಖನ ಸಾಕಷ್ಟು ಮಾಹಿತಿ ನೀಡಿತು. ಮೈಜುಂ ಎನಿಸುವ ಅನುಭವವನ್ನೂ ನೀಡಿತು.

-ಲೋಕಪ್ರಿಯ, ಕೈವಾರ

